**PW_7**

**1 ನೇ ಹೆಚ್ಚುವರಿ ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ,**

ಚಿತ್ರದುರ್ಗ

ಸಿ.ಸಿ.**2350/2021**

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಪ್ರೇಮಜಿತ್ | PW:7 |
| ತಂದೆಯ ಹೆಸರು | - | ಪ್ರೇಮದಾಸ್ | CW:20 |
| ವಯಸ್ಸು | - | 47 ವರ್ಷ | ಪ್ರಮಾಣ ವಚನ ಬೋದಿಸಿದ |
| ಉದ್ಯೋಗ | - | ರೀಜಿನಲ್ ರಿಸ್ಕ ಮ್ಯಾನೇಜರ್ | ದಿ: 19/06/2026 |
| ವಾಸ | - | ಕಣ್ಣೂರು, ಕೇರಳ | |

**ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದಃ**

1. 2010 ರಿಂದ 2020 ರ ರವರಗೆ ರೀಜನಲ್ ಕಚೇರಿ ಹುಬ್ಬಳ್ಳಿಯಲ್ಲಿ ರೀಜಿನಲ್ ರಿಸ್ಕ ಮ್ಯಾನೇಜರ್ ಆಗಿ ಕಾರ್ಯ ನಿರ್ವಹಿಸುತಿದ್ದೆ. ಎಲ್ಲ ಶಾಖೆಗಳಿಗೆ ಬೇಟಿ ನೀಡುವುದು ಮತ್ತು ಆಯಾ ಶಾಖೆಗಳಲ್ಲಿ ನಡೆದಿರುವ ಬ್ಯಾಂಕ್ ನ ವ್ಯವಹಾರಗಳನ್ನು ಪರಿಶೀಲನೆ ಮಾಡುತಿದ್ದೆ. ದಿಃ30.07.2011 ರಂದು ಚಿತ್ರದುರ್ಗದ ಐಸಿ ಐಸಿಐ ಬ್ಯಾಂಕ್ ಗೆ ಬೇಟಿ ನೀಡಿ ದಾಖಲೆಗಳನ್ನು ಪರಿಶೀಲಿಸಿದಾಗ ಒಂದು ಜುಯಲ್ ಪಾಕೆಟ್ ನಲ್ಲಿ 10 ಸಾವಿರ ನಗದು ಹಣ ಕಾಣೆಯಾಗಿದ್ದು ಹುಡುಕಿದ್ದು ಸಿಕ್ಕಿರಲಿಲ್ಲ. ಅದೇದಿನ ವಾಪಸ್ಸು ರೀಜನಲ್ ಕಚೇರಿಗೆ ಹೋಗಿದ್ದೆ.

2. ಮಾರನೇ ದಿನ 5 ನೇ ಆರೋಪಿ ಸದರಿ ಕಾಣೆಯಾಗಿದ್ದ 10 ಸಾವಿರ ಜುಯಲ್ ಪಾಕೆಟ್ ನಗದು ಹಣ ಸಿಕ್ಕಿದ್ದು ಆ ಬಗ್ಗೆ ಮಾಹಿತಿ ನೀಡಿದ್ದು ಅದೇ ದಿನ ಸದರಿ ಖಾತೆಗೆ ಸಂಬಂದಿಸಿದ ಖಾತೆದಾರ 10 ಸಾವಿರ ಹಣ ಪಡೆದು ಖಾತೆ ಮುಚ್ಚಿದ್ದ ಬಗ್ಗೆ ಮಾಹಿತಿ ನೀಡಿದ್ದರು.

3. 2011 ರ ಸೆಪ್ಟೆಂಬರ್ , ಅಕ್ಟೋಬರ್ ತಿಂಗಳಲ್ಲಿ ಚಿತ್ರದುರ್ಗದ

ಐಸಿಐಸಿಐ ಬ್ಯಾಂಕ್ ಗೆ ಬೇಟಿ ನೀಡಿದ ದಾಖಲೆ ಪರಿಶೀಲಿಸಿದಾಗ ಸದರಿ ಶಾಖೆಯಲ್ಲಿ 1,2,5 ನೇ ಆರೋಪಿಗಳು ಶಾಖಾದಿಕಾರಿಗಳಿದ್ದು ಅವರುಗಳ ಸಮಕ್ಷಮದಲ್ಲಿ ಜುಯಲ್ ಅಕೌಂಟ್ ಪರಿಶೀಲಿಸಿದಾಗ ಸರಿ ಇತ್ತು.

4. ದಿ:26.12.2011 ರಂದು ನಾನು ಪುನಃ ಶಾಖೆಗೆ ಬೇಟಿ ನೀಡಿ ದಾಖಲೆ ಪರಿಶೀಲಿಸಿದಾಗ 1 ನೇ ಆರೋಪಿ ಮ್ಯಾನೇಜರ್ ಇದ್ದು ಕೀ ರಿಜಿಸ್ಟರ್ ಪರಿಶೀಲಿಸಿದಾಗ ಸದರಿ ದಾಖಲೆ ಪರಿಪೂರ್ಣವಾಗಿ ವಿವರಣೆಗಳನ್ನು ನಮೂದಿಸಿರಲಿಲ್ಲ. ಆ ಬಗ್ಗೆ ನಮೂದಿಸಿದ್ದೆ.

5. ನಂತರ ಚಾಸಾ.21 ಐಸಿಐಸಿಐ ಚಿತ್ರದುರ್ಗ ಶಾಖೆಯಲ್ಲಿ ಜುಯಲರಿ ಪಾಕೆಟ್ಸ ಗೆ ಸಂಬಂದಿಸಿದಂತೆ ವಂಚನೆ ಆಗಿದೆ ಎಂಬ ಬಗ್ಗೆ ಮಾಹಿತಿ ನೀಡಿದ್ದು ಆ ಸಂಬಂದ ಪೊಲೀಸರು ನನ್ನನ್ನು ವಿಚಾರಣೆ ಮಾಡಿದ್ದು ಹೇಳಿಕೆ ನೀಡಿದ್ದೆ. 5 ಮತ್ತು 7 ನೇ ಆರೋಪಿಗಳು ಹಾಜರಿದ್ದು ಸಾಕ್ಷಿ ಗುರುತಿಸಿದ್ದು , 1 ರಿಂದ 4 ನೇ ಆರೋಪಿಗಳು ಗೈರು ಹಾಜರಿ ಗುರುತಿನ ಬಗ್ಗೆ ತಕರಾರು ಇಲ್ಲ ಎಂದು ಅರ್ಜಿ ಇಲ್ಲ ಎಂದು ಅರ್ಜಿ ಸಲ್ಲಿಸಿದ್ದು ಪುರಸ್ಕರಿಸಿದ್ದು ತಕರಾರು ಇಲ್ಲದ ಕಾರಣ ಸಾಕ್ಷಿ ಗುರುತಿಸಿರುತ್ತಾರೆ.

**ಪಾಟೀ ಸವಾಲು :1 ನೇ ಆರೋಪಿ ಪರ ವಕೀಲರು ಹಿರಿಯ ವಕೀಲರು ಇಲ್ಲ ಎಂದು ಕಾಲಾವಕಾಶ ಬೇಕೆಂದು ಕೋರಿದ್ದು ಸಕಾರಣ ಅಲ್ಲ ಕಾರಣ ಇಲ್ಲ**

**ಪಾಟೀಸವಾಲು ಃ 3 ಮತ್ತು 7 ನೇ ಆರೋಪಿ ಪರ ಶ್ರೀಮತಿ ಎಂ ಬಿ ರವರಿಂದ**

6. 3 ಮತ್ತು 7 ನೇ ಆರೋಪಿಗಳು ಚಿತ್ರದುರ್ಗದ ಐಸಿಐಸಿಐ ಬ್ಯಾಂಕ್ ಶಾಖೆಯಲ್ಲಿ ಏನು ಕರ್ತವ್ಯ ನಿರ್ವಹಿಸುತ್ತಾರೆ ಎಂಬ ಬಗ್ಗೆ ನನಗೆ ಖುದ್ದು ಮಾಹಿತಿ ಇಲ್ಲ. ದಿ:30.07.2011 ರಂದು ಚಿತ್ರದುರ್ಗದ ಐಸಿಐಸಿಐ ಬ್ಯಾಂಕ್ ಶಾಖೆಗೆ ಮದ್ಯಾಹ್ನ 12 ಗಂಟೆಗೆ ಬೇಟಿ ನೀಡಿ ಸಂಜೆ 6.30 ಅಥವಾ 7 ಗಂಟೆವರೆಗೆ ಶಾಖೆಯಲ್ಲಿ ಇದ್ದಿರಬಹುದು. 10 ಸಾವಿರ ಜುಯಲ್ ಪಾಕೆಟ್ ಸಂಬಂದಿಸಿದಂತೆ ನಗದು

ಕಾಣೆಯಾಗಿದೆ ಎಂದು ನುಡಿದಿದ್ದು ಆ ಸಂಬಂದ ಶಾಖೆಯಲ್ಲಿ ದಾಖಲೆಗಳು ಇರುತ್ತವೆ. ಪೊಲೀಸರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದ ಕಾಲಕ್ಕೆ ಯಾವುದೇ ದಾಖಲೆಗಳನ್ನು ನಾನು ಪೊಲೀಸರಿಗೆ ನೀಡಿಲ್ಲ. ಚಿತ್ರದುರ್ಗದ ಐಸಿಐಸಿಐ ಬ್ಯಾಂಕ್ ಶಾಖೆಯಲ್ಲಿ ಸಿಸಿ ಕ್ಯಾಮೆರಾ ಅಳವಡಿಸಲಾಗಿದೆ. ನಾನು ಜುಲೈ ತಿಂಗಳಲ್ಲಾಗಲಿ ಸೆಪ್ಟೆಂಬರ್ , ಅಕ್ಟೋಬರ್ , ಡಿಸೆಂಬರ್ , ಪೆಬ್ರವರಿ ತಿಂಗಳಲ್ಲಿ ಎಂದೂ ಚಿತ್ರದುರ್ಗದ ಐಸಿಐಸಿಐ ಬ್ಯಾಂಕ್ ಶಾಖೆಗೆ ಬೇಟಿ ನೀಡಿಲ್ಲ ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀಸವಾಲು ಃ 5 ನೇ ಆರೋಪಿ ಪರ ಶ್ರೀಮತಿ ಡಿ ಕೆ ಎಸ್ ರವರಿಂದ</u>**

7. ಪ್ರತಿ 2 ತಿಂಗಳಿಗೊಮ್ಮೆ ನಾನು ರೀಜನಲ್ ರಿಸ್ಕ ಮ್ಯಾನೇಜರ್ ಆಗಿ ಶಾಖೆಗಳನ್ನು ಪರಿಶೀಲಿಸಲು ಬೇಟಿ ನೀಡುತಿದ್ದೆ. ಸೆಪ್ಟೆಂಬರ್-ಅಕ್ಟೋಬರ್ 2011 ರಲ್ಲಿ ಚಿತ್ರದುರ್ಗದ ಐಸಿಐಸಿಐ ಬ್ಯಾಂಕ್ ಶಾಖೆಗೆ ಬೇಟಿ ನೀಡಿದಾಗ ಜುಯಲ್ ಖಾತೆಗಳು ಮತ್ತು ಪಾಕೆಟ್ ಗಳು ಯಥಾ ಸ್ತಿತಿಯಲ್ಲಿದ್ದವು. ಅದೇರೀತಿ ಡಿಸೆಂಬರ್ 2026 ರಂದು ಬೇಟಿ ನೀಡಿದಾಗ ಸಹ ಜುಯಲ್ ಖಾತೆ ಮತ್ತು ಪಾಕೆಟ್ ಗಳು ಯಥಾ ಸ್ತಿತಿಯಲ್ಲಿದ್ದವು. ಸದರಿ ಖಾತೆಗಳನ್ನು ನಾನು ಪರಿಶೀಲಿಸಿದಾಗ ಖಾತೆಗಳು ಮತ್ತು ಜುಯಲ್ ಪಾಕೆಟ್ ಗಳು ಯತಾ ಸ್ತಿತಿಯಲ್ಲಿವೆ ಎಂಬ ಬಗ್ಗೆ ಆಡಿಟ್ ನಲ್ಲಿ ಕಾಣಿಸಿದೆ ಎಂದರೆ ಸರಿ.

8. ದಿಃ14.11.2011 ರಂದು 5 ನೇ ಆರೋಪಿ ಚಿತ್ರದುರ್ಗದ ಐಸಿಐಸಿಐ ಬ್ಯಾಂಕ್ ಶಾಖೆಯಿಂದ ಶಾಖಾದಿಕಾರಿ ಸ್ತಾನದಿಂದ ನಿವೃತ್ತಿ ಹೊಂದಿರುತ್ತಾರೆ ಎಂದರೆ ಸಾಕ್ಷಿ ದಿನಾಂಕ ನೆನಪಿಲ್ಲ ಆದರೆ ನಿವೃತ್ತಿ ಹೊಂದಿರುತ್ತಾರೆ ಎಂದು ನುಡಿಯುತ್ತಾರೆ. 5ನೇ ಆರೋಪಿ ನಿವೃತ್ತಿ ಹೊಂದುವ ಪೂರ್ವದಲ್ಲಿ 3 ತಿಂಗಳ ಮುಂಚಿತವಾಗಿ ಶಾಖೆಯಿಂದ ನಿವೃತ್ತಿ ಹೊಂದಲು ಅನುಮತಿ ಕೋರಿ ಪತ್ರ ವ್ಯವಹಾರ ಮಾಡಿದ್ದಾರೆ ಎಂದರೆ ಆ ಬಗ್ಗೆ ನನಗೆ ತಿಳಿದಿಲ್ಲ ಆದರೆ ನಿವೃತ್ತಿ ಹೊಂದುವ ಪೂರ್ವದಲ್ಲಿ ತಿಳುವಳಿಕೆ

**PW_7**

ನೀಡಬೇಕೆಂಬ ಕ್ರಮ ಇದೆ ಎಂದು ಉತ್ತರಿಸುತ್ತಾರೆ. 14.11.2011 ರಂದು 5 ನೇ ಆರೋಪಿ ಶಾಖೆಯಿಂದ ನಿವೃತ್ತಿ ಹೊಂದುವ ಕಾಲಕ್ಕೆ ಸಂಬಂದಪಟ್ಟ 5 ನೇ ಆರೋಪಿ ಸ್ಥಾನದ ಸಂಪೂರ್ಣ ಪ್ರಬಾರವನ್ನು 5 ನೇ ಆರೋಪಿಯಿಂದ ಸಂಬಂದಪಟ್ಟ ಸೂಚಿಸಿದ ವ್ಯಕ್ತಿ ಪಡೆದುಕೊಳ್ಳುತ್ತಾರೆ ಎಂದರೆ ಸರಿ. ಸದರಿ ಪ್ರಬಾರದಡಿ ಪಡೆದ ಆತನ ಸ್ಥಾನದ ಎಲ್ಲ ದಾಖಲೆಗಳನ್ನು ಪಡೆದು ಮುಕ್ತಗೊಳಿಸಲು ಸೂಕ್ತ ಎಂದು ಕಂಡಲ್ಲಿ ಮಾತ್ರ ಪದಮುಕ್ತಗೊಳಿಸುತ್ತಾರೆ ಎಂದರೆ ಸರಿ.

9. ದಿ:26.12.2011 ರಂದು ನಾನು ಚಿತ್ರದುರ್ಗದ ಐಸಿಐಸಿಐ ಬ್ಯಾಂಕ್ ಶಾಖೆಗೆ ಬೇಟಿ ನೀಡಿದಾಗ 5 ನೇ ಆರೋಪಿ ಶಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರಲಿಲ್ಲ ಕಾರಣ ನಿವೃತ್ತಿ ಹೊಂದಿದ್ದರು ಎಂದರೆ ಇರಬಹುದು. 25.11.2011 ರ ಕಾಲಕ್ಕೆ 5 ನೇ ಆರೋಪಿ ಬೆಂಗಳೂರಿನ ಹೆಚ್ ಡಿ ಎಪ್ ಸಿ ಶಾಖೆಯಲ್ಲಿ ಕಾರ್ಯನಿರ್ವಹಿಸುತಿದ್ದರು ಎಂದರೆ ಸರಿ.

**<u>ಪಾಟೀಸವಾಲು ಃ 2 ಮತ್ತು 4 ನೇ ಆರೋಪಿಗಳ ಪರ ಶ್ರೀಮತಿ ಡಿ ಎಮ್ ಬಿ ರವರಿಂದ</u>**

10. 4 ನೇ ಆರೋಪಿ ಪೀಲ್ಡ್ ಆಪೀಸರ್ ಆಗಿ ಕೆಲಸ ಮಾಡುತ್ತಿದುದು ಎಂದರೆ ಸರಿ. 4 ನೇ ಆರೋಪಿ ಪೀಲ್ಡ್ ಆಪೀಸರ್ ಇದ್ದು ಕಾರಣ ಸಾಲ ಪಡೆಯುವರಿಗೆ ಸಂಬಂದಿಸಿದ ಸ್ತಳಗಳನ್ನು ಪರಿಶೀಲಿಸಿ ಆ ಸಂಬಂದ ಬ್ಯಾಂಕ್ ಗೆ ವರದಿ ನೀಡುವ ಕಾರ್ಯ ಮಾಡುತ್ತಾರೆ ಎಂದರೆ ಸರಿ. ನನಗೆ ಕನ್ನಡ ಸ್ವಲ್ಪ ಸ್ವಲ್ಪ ಬರುತ್ತದೆ ಆದರೆ ಪೊಲೀಸರಿಗೆ ಹೇಳಿಕೆ ನೀಡುವಾಗ ಹೇಳಿದ್ದೇನೆ. ಸದರಿ ಹೇಳಿಕೆಯನ್ನು ಓದಿ ಹೇಳಿದ್ದು ತಿಳಿದುಕೊಂಡಿದ್ದೇನೆ. ಸದರಿ ನನ್ನ ಹೇಳಿಕೆಯನ್ನು ಯಾರು ಓದಿ ಹೇಳಿದ್ದರು ನನಗೆ ನೆನಪಿಲ್ಲ.

**PW_7**

11. 2 ನೇ ಆರೋಪಿ ಶಾಖೆ ಯಲ್ಲಿ ಬ್ರಾಂಚ್ ಆಪರೇಶನ್ ಮ್ಯಾನೇಜರ್ ಆಗಿ ಕಾರ್ಯನಿರ್ವಹಿಸುತಿದ್ದರು. 2 ಮತ್ತು 4 ನೇ ಆರೋಪಿಗಳಿಗೂ ಈ ಕೇಸಿಗೂ ಸಂಬಂದ ಇಲ್ಲ ಎಂದರೆ ಸರಿಯಲ್ಲ ಅವರುಗಳೇ ಕಸ್ಟೋಡಿಯನ್ ಎಂದು ನುಡಿಯುತ್ತಾರೆ. ಸೆಪ್ಟೆಂಬರ್ ಅಕ್ಟೋಬರ್ ನಲ್ಲಿ ಖಾತೆ ಮತ್ತು ಜುಯಲ್ ಪಾಕೆಟ್ ಪರಿಶೀಲಿಸಿದಾಗ ಸುಸ್ತಿತಿಯಲ್ಲಿದ್ದವು. 2 ನೇ ಬಾರಿ ಬೇಟಿ ನೀಡಿದಾಗ ಸಹ ಸುಸ್ತಿತಿಯಲ್ಲಿದ್ದವು. 2 ಮತ್ತು 4 ನೇ ಆರೋಪಿಗಳಿಗೂ ಈ ಕೇಸಿಗೂ ಸಂಬಂದ ಇಲ್ಲ ಹಿರಿಯ ಅದಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ನನ್ನನ್ನು ವಿಚಾರಣೆ ಮಾಡಿಲ್ಲ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚುಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**1 ನೇ ಹೆಚ್ಚುವರಿ ಹಿರಿಯ ಸಿವಿಲ್ ಮತ್ತು**
**ಜೆ ಎಂ ಎಫ್ ಸಿ ನ್ಯಾಯಾಧೀಶರು, ಚಿತ್ರದುರ್ಗ**